ಕರ್ನಾಟಕ ಸರ್ಕಾರ

# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ/ಕಂ/ಅಪೀಲು/15/15-16

ದಿನಾಂಕ : 02/08/2016

ಉಪಸ್ಥಿತರು: ಶ್ರೀ ಲೋಕೇಶ್ ಪಿ. ಎನ್, ಕ. ಆ. ಸೇ.

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ವಿರೇಶ ತಂದೆ ವೀರಭದ್ರಯ್ಯ<br>ತಾರನಗರ ಗ್ರಾಮ<br>ಸಂಡೂರು ತಾಲ್ಲೂಕು , ಬಳ್ಳಾರಿ ಜಿಲ್ಲೆ<br><br>(ಶ್ರೀ ಬಿ.ವಿ. ಬಸವರಾಜ್ ಮತ್ತು ಜಿ. ನೀಲನಗೌಡ, ವಕೀಲರು, ಬಳ್ಳಾರಿ) | 1. ಶ್ರೀ ಆರ್. ವೆಂಕಮ್ಮ ಗಂಡ ಗೌರಿಪುರ ಸುಬಣ್ಣ ತಾರನಗರ ಗ್ರಾಮ, ಸಂಡೂರು ತಾ, ಬಳ್ಳಾರಿ ಜಿ<br>2. ಶ್ರೀಮತಿ ಎಸ್. ಆರ್. ಮಂಜುಳಾ ಗಂಡ ಎಸ್. ಆರ್. ನಟರಾಜ ತಾರನಗರ ಗ್ರಾಮ, ತಾ. ಸಂಡೂರು, ಜಿ. ಬಳ್ಳಾರಿ<br>3. ಶ್ರೀಮತಿ ಚನ್ನಬಸಮ್ಮ ಗಂಡ ರುದ್ರಯ್ಯ ತಾರನಗರ ಗ್ರಾಮ, ತಾ. ಸಂಡೂರು, ಜಿ. ಬಳ್ಳಾರಿ<br>4. ತಹಶೀಲ್ದಾರರು, ಸಂಡೂರು<br>5. ಕಂದಾಯ ನೀರಿಕ್ಷಕರು, ತಾರನಗರ<br>6. ಗ್ರಾಮಲೆಕ್ಕಾಧಿಕಾರಿಗಳು, ಬನ್ನಿಹಟ್ಟಿ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸಂ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಂಡೂರು | ಬನ್ನಿಹಟ್ಟಿ | 177/1 | 2-35 | |

ವಾದಿಯು ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿ ಕಂದಾಯ ನಿರೀಕ್ಷಕರು, ಸಂಡೂರು ಇವರ ಹಿಂಬರಹ ಕಂ.ಪಹಣಿ/401/14-15 ದಿನಾಂಕ: 18-03-2015ರ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ 21/07/2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಯು ಈ ನ್ಯಾಯಾಲಯಕ್ಕೆ ಸದರಿ ಮೇಲ್ಮನವಿಯನ್ನು ಸಲ್ಲಿಸಿ, ಸಂಡೂರು ತಾಲ್ಲೂಕು ಬನ್ನಿಹಟ್ಟಿ ಗ್ರಾಮದ ಸ. ನಂ. 177/1 ರಲ್ಲಿ ವಿಸ್ತೀರ್ಣ 2-35 ಎಕರೆ ಜಮೀನು ಪಾಲು ಪತ್ರದಂತೆ ಹಕ್ಕು ಬದಲಾವಣೆ ಸಂಖ್ಯೆ 38/1995-96 ರಲ್ಲಿ ಹಕ್ಕು ಬದಲಾವಣೆಯಾಗಿದ್ದು, 1996-97 ರವರೆವಿಗೂ ಪಹಣಿಯಲ್ಲಿ ವಾದಿಯ ಹೆಸರು ನಮೂದಾಗಿದ್ದು ತದನಂತರ ಪಹಣಿಯಿಂದ ಕೈಬಿಟ್ಟಿರುವುದನ್ನು ಪ್ರಶ್ನಿಸಿ, ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ವಾದಿಗಳು ಪಾಲುವಿಭಾಗ ಪತ್ರದಂತೆ ಪ್ರತಿವಾದಿ 3 ಮತ್ತು ತನ್ನ ಹೆಸರಿಗೆ ಪ್ರಸ್ತಾಪಿತ ಸ. ನಂ. ನಲ್ಲಿ ತಲಾ ವಿಸ್ತೀರ್ಣ 2.35 ಎಕರೆ ಜಮೀನು ಹಕ್ಕು ಬದಲಾವಣೆಯಾಗಿದ್ದು, ಪಹಣಿಯಲ್ಲಿಯೂ ನಮೂದು ಇದ್ದು, ತದನಂತರ ಪಹಣಿಯಿಂದ ತನ್ನ ಹೆಸರನ್ನು ಬಿಟ್ಟಿರುವುದಾಗಿ ಸದರಿ ವಿಸ್ತೀರ್ಣವನ್ನು ತನ್ನ ಹೆಸರಿಗೆ ನಮೂದು ಮಾಡಿ ಕೊಡಲು ಆದೇಶ ನೀಡಬೇಕೆಂದು ಕೋರಿರುತ್ತಾರೆ.

ವಾದಿಗಳು ಸಲ್ಲಿಸಿದ ಮೇಲ್ಮನವಿ ಹಾಗೂ ದಾಖಲೆಗಳು ಮತ್ತು ಪಹಣಿಯನ್ನು ಪರಿಶೀಲಿಸಲಾಗಿ, ವಾದಿಯ ಹೆಸರು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಇವರ ಆದೇಶದ ಮೇರೆಗೆ ಎಂ ನಂ 56/88-89 ರ ಆದೇಶವನ್ನು ಕಾರ್ಯಗತಗೊಳಿಸಿರುವುದರಿಂದ ಕಡಿಮೆಯಾಗಿರುವುದು ವೇದ್ಯವಾಗುತ್ತದೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಇವರ

ಆದೇಶದಿಂದ ವಾದಿಯು ಭಾದಿತರಾಗಿದ್ದಲ್ಲಿ, ಭೂ ದಾಖಲೆಗಳ ಉಪನಿರ್ದೇಶಕರು ಇವರಲ್ಲಿ ಮೇಲ್ಮನವಿ ಸಲ್ಲಿಸುವುದು ಅಗತ್ಯವಿರುತ್ತದೆ. ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದು ಸೂಕ್ತವಾಗಿರುವುದಿಲ್ಲ, ಕಾರಣ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ, ವಿಲೇಗೊಳಿಸಲು ಆದೇಶಿಸುವ ಈ ಕೆಳಕಂಡ ಆದೇಶ.

## ಆದೇಶ

ವಾದಿಯ ಮೇಲ್ಮನವಿಯನ್ನು ತಿರಸ್ಕರಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ ಮತ್ತು ಕಾರಣಗಳಿಗಾಗಿ, ಮೇಲ್ಮನವಿಯನ್ನು ವಜಾಗೊಳಿಸಿ, ಪ್ರಕರಣವನ್ನು ವಿಲೇಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 02/08/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ

ಗೆ,
ವಾದಿ ಮತ್ತು ಪ್ರತಿವಾದಿಗಳಿಗೆ
ತಹಶೀಲ್ದಾರರು, ಸಂಡೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.